**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 1890/2023**

ಸಿ ಡಬ್ಲ್ಯೂ -12

ಪಿ ಡಬ್ಲ್ಯೂ-08

| | | |
|---|---|---|
| **ಸಾಕ್ಷಿದಾರರ ಹೆಸರು** | : | ಕೆ.ಸಿ.ಕೋಮಲಾಚಾರ್ |
| **ತಂದೆ/ಗಂಡನ ಹೆಸರು** | : | ಕೆ.ಎನ್.ಚಂದ್ರಶೇಖರಚಾರ್ |
| **ವಯಸ್ಸು** | : | 58 ವರ್ಷ |
| **ಉದ್ಯೊಗ** | : | ನಿವೃತ್ತ ಪಿಎಸ್‌ಐ |
| **ವಾಸ** | : | ರಾಣೇಬೆನ್ನೂರು |

**ದಿನಾಂಕಃ 19-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು ದಿಃ 26-08-2020 ರಿಂದ 02-12-2022 ರವರೆಗೆ ಹಲಗೇರಿ ಪೋಲಿಸ್ ಠಾಣೆಯಲ್ಲಿ ಅಪರಾಧಿ ವಿಭಾಗದಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28-06-2022 ರಂದು ಬೆಳಿಗ್ಗೆ 7.30 ಗಂಟೆಗೆ ನಾನು ಹಲಗೇರಿ ಪೋಲಿಸ್ ಠಾಣೆಯಲ್ಲಿದ್ದಾಗ ಅದೇ ಪೋಲಿಸ್ ಠಾಣೆಯ ಕಾನೂನು ಪಿಎಸ್‌ಐ ರವರಾದ ಚಾಸಾ-11 ರವರು ನನ್ನ ಮುಂದೆ ಹಾಜರಾಗಿ ಮೂರು ಜನ ವ್ಯಕ್ತಿಗಳನ್ನು ಹಾಗೂ ಒಂದು ಜಪ್ತು ಪಂಚನಾಮೆಯನ್ನು ಮತ್ತು ಒಂದು ವರದಿಯನ್ನು ಹಾಜರು ಪಡಿಸಿದ್ದು , ಆ ವರದಿಯನ್ನು ಪರಿಶೀಲಿಸಿದಾಗ ಚಾಸಾ-11 ರವರು ಹಿಂದಿನ ದಿನ ರಾತ್ರಿಯಿಂದ ಈ ದಿನ ಬೆಳಗಿನವರೆಗೆ ಗಸ್ತು ಕರ್ತವ್ಯ ನಿರ್ವಸುವಾಗ ಬೆಳಗಿನ ಜಾವ ಹಲಗೇರಿ ಗ್ರಾಮದಿಂದ ರಾಣೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬಸವಣ್ಣ ದೇವರ ದೇವಸ್ಥಾನದ ಹತ್ತಿರ ಮೂರು ಜನ ವ್ಯಕ್ತಿಗಳು ಗೂಡ್ಸ ಆಟೋ ರಿಕ್ಷಾದಲ್ಲಿ ಕಬ್ಬಿಣದ ರಾಡುಗಳನ್ನು ಹಾಗೂ ಒಂದು ಮೋಟಾರ್ ಸೈಕಲ್ ನ್ನು ತೆಗೆದು ಕೊಂಡು ಹೋಗುತ್ತಿರುದನ್ನು ಕಂಡು ಸಂಶಯದಿಂದ ಅವರನ್ನು ಹಿಡಿದು ವಿಚಾರಣೆ ಮಾಡಿದಾಗ ಸದರಿ ಗೂಡ್ಸ ಆಟೋ ರಿಕ್ಷಾ , ಅದರಲ್ಲಿದ್ದ ಕಬ್ಬಿಣದ ರಾಡುಗಳು ಮತ್ತು ಒಂದು ಮೋಟಾರ್ ಸೈಕಲ್ ಕಳ್ಳತನ ಮಾಡಿದವುಗಳು ಎಂದು ಹಾಗೂ ಅವುಗಳನ್ನು ಮಾರಾಟ ಮಾಡಲು ರಾಣೇಬೆನ್ನೂರಿಗೆ ತೆಗೆದು ಕೊಂಡು ಹೋಗುತ್ತಿರುದಾಗಿ ಹೇಳಿದ್ದರಿಂದ ಸ್ಥಳದಲ್ಲಿ ಇಬ್ಬರು ಪಂಚರನ್ನು ಹಾಜರು ಪಡಿಸಿಕೊಂಡು ಕಳ್ಳತನವಾದ ವಸ್ತುಗಳನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿಕೊಂಡು

ಸಿ ಡಬ್ಲ್ಯೂ -12

ಪಿ ಡಬ್ಲ್ಯೂ-08

ಬಂದಿದ್ದಾಗಿ ತಿಳಿಸಿ ವಸ್ತುಗಳನ್ನು ಹಾಗೂ ಆರೋಪಿತರನ್ನು ತಂದು ನನ್ನ ಮುಂದೆ ಹಾಜರು ಪಡಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ನನಗೆ ತಿಳಿಸಿರುತ್ತಾರೆ. ಚಾಸಾ-11 ರವರು ಹಾಜರು ಪಡಿಸಿದ ಮೋಟಾರ್ ಸೈಕಲ್ ಹಲಗೇರಿ ಪೋಲಿಸ್ ಠಾಣೆಯ ಅಪರಾಧ ಸಂಖ್ಯೆ .124/2022 ಕಲಂ.379 ಐಪಿಸಿ ಪ್ರಕರಣದಲ್ಲಿ ಕಳ್ಳತನವಾದ ವಾಹನ ಆಗಿದ್ದರಿಂದ ಹಾಗೂ ಆ ಪ್ರಕರಣದ ತನಿಖಾಧಿಕಾರಿ ನಾನೇ ಆಗಿದ್ದರಿಂದ ಅವುಗಳನ್ನು ವಶಕ್ಕೆ ಪಡೆದು ಕೊಂಡು ನಂತರ ಸದರಿ ವಸ್ತುಗಳನ್ನು ವಶಕ್ಕೆ ಪಡೆದು ಕೊಂಡ ಬಗ್ಗೆ ನ್ಯಾಯಾಲಯಕ್ಕೆ ಪಿ.ಎಫ್ ನ್ನು ಸಲ್ಲಿಸಿರುತ್ತೇನೆ. 1 ನೇ ಆರೋಪಿತನಾದ ಪ್ರಸನ್ನ ತಂದೆ ಬಸವರಾಜ ಕೋಗಳೆ ರವರನ್ನು ದಸ್ತಗಿರಿ ಮಾಡಿರುತ್ತೇನೆ. ಉಳಿದ 2 ಮತ್ತು 3 ನೇ ಆರೋಪಿತರು ಅಲ್ಪವಯಿಗಳಾಗಿದ್ದರಿಂದ ಅವರನ್ನು ವಿಚಾರಣೆ ಮಾಡಿ 3 ಜನರ ಸ್ವ-ಇಚ್ಛಾ ಹೇಳಿಕೆಗಳನ್ನು ಪಡೆದು ಕೊಂಡು ಸದರಿ ಆರೋಪಿತರ ತಂದೆ-ತಾಯಿಗೆ ಸದರಿ ವಿಷಯವನ್ನು ತಿಳಿಸಿರುತ್ತೇವೆ. ಆರೋಪಿತರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇವೆ. ದಿಃ 28-06-2022 ರಂದು ರಾಣೇಬೆನ್ನೂರು ಗ್ರಾಮೀಣ ಪೋಲಿಸ್ ಠಾಣೆ ಗುನ್ನಾ ನಂ.140/2022 ರ ಪ್ರಕರಣದಲ್ಲಿ ಕಬ್ಬಿಣದ ರಾಡುಗಳನ್ನು ಕಳ್ಳತನ ಮಾಡಿದ ಜಾಗಕ್ಕೆ ಕರೆದು ಕೊಂಡು ಹೋಗಿ ನಮಗೆ ತೋರಿಸಿದ್ದು , ಆ ಸ್ಥಳದಲ್ಲಿ ಪಂಚನರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಮಧ್ಯಾಹ್ನ 3.00 ರಿಂದ 3.30 ರವರೆಗೆ ಸ್ಥಳ ಪಂಚನಾಮೆ ಮಾಡಿ, ಆ ಕಾಲಕ್ಕೆ 2 ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು. ಸದರಿ ಎರಡು ಪೋಟೋಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ನಂತರ ಠಾಣೆಗೆ ವಾಪಸ್ಸು ಬಂದು 1 ನೇ ಆರೋಪಿತನನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಕೇಳಿಕೊಂಡಿರುತ್ತೇನೆ. ನಂತರ ಚಾಸಾ-12 ರಿಂದ ಚಾಸಾ-15 ರವರ ಹೇಳಿಕೆಯನು ಪಡೆದು ಕೊಂಡಿರುತ್ತೇನೆ. ನಂತರ ದಿಃ 29-06-2022 ರಂದು ಚಾಸಾ-16 ರವರಿಗೆ ತಮ್ಮ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನವಾದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿ ಇದರ ಬಗ್ಗೆ ಮುಂದಿನ ಕ್ರಮಕೈಗೊಳ್ಳಿ ಎಂದು ಒಂದು ಸಂದೇಶವನ್ನು ರವಾನಿಸಿರುತ್ತೇನೆ. ದಿಃ 07-08-2022 ರಂದು ಕಬ್ಬಿಣದ ಮಾಲೀಕರಾದ ಚಾಸಾ-1 ರವರು ನ್ಯಾಯಾಲಯದಿಂದ ಕಬ್ಬಿಣದ ರಾಡ್ ಗಳ ಬಿಡುಗಡೆ ಆದೇಶವನ್ನು ಪಡೆದು ಕೊಂಡು ನಮ್ಮ ಠಾಣೆಗೆ ಹಾಜರಾಗಿದ್ದರಿಂದ ಸದರಿಯವರ ಹೇಳಿಕೆಯನ್ನು ಪಡೆದು ಕೊಂಡಿರುತ್ತೇನೆ. ದಿಃ 15-12-2022 ರಂದು ವಶಪಡಿಸಿಕೊಂಡ ವಸ್ತುಗಳನ್ನು ಹಾಗೂ ತನಿಖಾ ಕಾಲದ ಪತ್ರಗಳನ್ನು ಚಾಸಾ-16 ರವರಿಗೆ ವರ್ಗಾವಣೆ ಮಾಡಿರುತ್ತೇನೆ. ಮುಂದಿನ

ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-16 ರವರಿಗೆ ವಹಿಸಿ ಕೊಟ್ಟಿರುತ್ತೇನೆ. 2 ಮತ್ತು 3 ನೇ ಆರೋಪಿತರವರ ವಯಸ್ಸಿನ ದಾಖಲೆಗಳನ್ನು ಸಂಬಂಧಪಟ್ಟ ಶಾಲೆಯಿಂದ ಪಡೆದು ಕೊಂಡು ಸದರಿಯವರು ಅಪ್ರಾಪ್ತರು ಎಂದು ಖಾತ್ರಿ ಪಡಿಸಿಕೊಂಡು ಸದರಿ ದಾಖಲೆಗಳನ್ನು ಚಾಸಾ-16 ರವರಿಗೆ ಕೊಟ್ಟಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಹೆಚ್.ಜಿ. ವಕೀಲರಿಂದಃ**

ಚಾಸಾ-11 ರವರು ಕಬ್ಬಿಣದ ರಾಡ್ ಗಳನ್ನು ಮತ್ತು ಮೋಟಾರ್ ಸೈಕಲ್ ಗಳನ್ನು ಆರೋಪಿಯಿಂದ ಜಪ್ತು ಪಡಿಸಿಕೊಂಡಿದ್ದೇನೆ ಎಂದು ಹೇಳಿ ನನ್ನ ಮುಂದೆ ಹಾಜರು ಪಡಿಸಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿ ಆಟೋ ರಿಕ್ಷಾ ಮತ್ತು ಕಬ್ಬಿಣದ ರಾಡ್ ಗಳನ್ನು ತಾವು ಕಳ್ಳತನ ಮಾಡಿರುತ್ತಾರೆ ಎಂದು ಸ್ವ-ಇಚ್ಛಾ ಹೇಳಿಕೆ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತೋರಿಸಿದ ಸ್ಥಳದಲ್ಲಿ ನಾನು ನಿಪಿ-9 ರಂತೆ ಮಹಜರ್ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ಮತ್ತು 11 ನ್ನು ಪ್ರಕರಣವನ್ನು ಅನುಕೂಲವಾಗುವಂತೆ ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-12 ರಿಂದ 15 ರವರ ಹೇಳಿಕೆಗಳನ್ನು ಪಡೆದು ಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಸಮಕ್ಷ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಲುಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯದು ಯಾವುದೇ ತಪ್ಪು ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನಾನು ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

-

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.